**ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ ನ್ಯಾಯಾಲಯ ಕುಂದಗೋಳ**

**ಓ ಎಸ್ ನಂಃ 13/2020**

**ಡಿ ಡಬ್ಲ್ಯೂಃ1**

**ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತುಃ ದಿಃ 15.10.2025**

**ಪಾಟೀ ಸವಾಲುಃ ಶ್ರೀ ಎನ್ ಎಸ್ ಇ ವಕೀಲರಿಂದ ವಾದಿ ಪರ ವಕೀಲರುಃ**

1. 1 ನೇ ವಾದಿ ನನ್ನ ತಂದೆ. 2 ನೇ ವಾದಿ ನನ್ನ ಅಕ್ಕ. 2 ನೇ ಪ್ರತಿವಾದಿ ನನ್ನ ಹೆಂಡತಿ. ನನ್ನ ತಂದೆಯ ವಿರುದ್ಧ ಈ ದಾವಾ ಅವರು ನನ್ನ ವಿರುದ್ಧ ದಾಖಲಿಸುವ ಮುನ್ನ ನಾನು ಓ ಎಸ್ ನಂಃ60/2015 ರಂತೆ ಇದೇ ನ್ಯಾಯಾಲಯದಲ್ಲಿ ಹಿಸ್ಸೆ ಕೋರಿ ದಾವಾ ದಾಖಲಿಸಿದ್ದೆ ಎಂದರೆ ಸರಿ.

2. ಸ.ನಂಃ277 ಮೂಲತಃ 2 ಎಕರೆ 24 ಗುಂಟೆ ಜಮೀನಿದ್ದು, ನಂತರ ಆ ಪೈಕಿ 2 ಎಕರೆ 16 ಗುಂಟೆ ಜಮೀನು ಶೇತ್ಕಿ ಜಮೀನಾಗಿ ಉಳಿದು , ಇನ್ನುಳಿದ 8 ಗುಂಟೆ ಜಮೀನು ಎನ್ ಎ ಆಗಿರುತ್ತದೆ ಎಂದರೆ ಸಾಕ್ಷಿ ಅದನ್ನು ಆವಾಗೆ ಮಾಡಿಸಿದ್ದು ಎಂದು ನುಡಿಯುತ್ತಾರೆ. ಈ

2 ಎಕರೆ 16 ಗುಂಟೆ ಶೇತ್ಕಿ ಹಾಗೂ 8 ಗುಂಟೆ ಎನ್ ಎ ಜಮೀನುಗಳನ್ನು 2 ನೇ ವಾದಿಗೆ 1 ನೇ ವಾದಿ ದಾನ ಪತ್ರ ಮಾಡಿರುವುದು ಅದು ಪಿತ್ರಾರ್ಜಿತ ಆಸ್ತಿಗಳು ಅಂತ ಹೇಳಿ, ನಾನು ಓ ಎಸ್ ನಂಃ60/2015 ರಲ್ಲಿ ಪಿತ್ರಾರ್ಜಿತ ಆಸ್ತಿ ಎಂದು ಹೇಳಿದೆ ಎಂದರೆ ಸರಿ.

3. ನಂತರ ಈ ದಾವೆಯ ವಾದಿ ಓ ಎಸ್ ನಂಃ60/2015 ರಲ್ಲಿ ಕೌಂಟರ ಕ್ಲೇಮ್ ದಾಖಲಿಸಿ ಅದರಲ್ಲಿ ಒಟ್ಟಾರೆ 9 ಎಕರೆ ಜಮೀನು ಮತ್ತು ಎರಡು ಪ್ಲಾಟುಗಳನ್ನು ದಾವೆಯಲ್ಲಿ ಸೇರಿಸಿಲ್ಲ ಹೇಳಿದ್ದರು ಎಂದರೆ ಸಾಕ್ಷಿ ಒಷ್ಟರಲ್ಲಿ ಹಿಸ್ಸೆ ಕೊಡಿ ಅಂತ ದಾಖಲಿಸಿದ್ದೆ ಎಂದು ನುಡಿಯತ್ತಾರೆ. ಓ ಎಸ್ ನಂಃ60/2015 ರಲ್ಲಿ ಕೇವಲ ನಾವು ಬಕ್ಷೀಸ್ ಆಗಿರುವ ಆಸ್ತಿಗೆ ಸಂಬಂದಪಟ್ಟ ಹಾಗೇ ಮಾತ್ರ ದಾಖಲಿಸಿದ್ದೇವು ಎಂದರೆ ಸರಿಯಲ್ಲ.

4. ಓ ಎಸ್ ನಂಃ60/2015 ರಲ್ಲಿ 9 ಎಕರೆ ಜಮೀನಿನಲ್ಲಿ ಮಾತ್ರ ನನಗೆ ಹಿಸ್ಸೆಗೆ ಬಂದು ಬಕ್ಷೀಸ್ ನೀಡಿದ 2 ಎಕರೆ 24 ಗುಂಟೆ ಜಮೀನು 2 ನೇ ವಾದಿಯ ಸ್ವಯಾರ್ಜಿತ ಆಸ್ತಿ ಅಂತ ಅದರಲ್ಲಿ ಯಾವುದೇ ಹಿಸ್ಸೆ ಬಂದಿರುವುದಿಲ್ಲ ಎಂದರೆ ಸಾಕ್ಷಿ ನನಗೆ ಯಾವುದರಲ್ಲಿ ಹಿಸ್ಸೆ ಬಂದಿಲ್ಲ ಎಂದು ನುಡಿಯುತ್ತಾರೆ. ಓ ಎಸ್ ನಂಃ60/2015 ರಲ್ಲಿ 9 ಎಕರೆಯಲ್ಲಿ ಮಾತ್ರ ನಾಲ್ಕು ಹಿಸ್ಸಾ ಆಗಿ, ನಾನು ಕೇಳಿದ ಪರಿಹಾರ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

5. ಸ.ನಂಃ277 ರಲ್ಲಿ ಇರುವ 2 ಎಕರೆ 24 ಗುಂಟೆ ಒಟ್ಟಾರೆ ಜಮೀನು ನನ್ನ ತಂದೆಯ ಸ್ವಯಾರ್ಜಿತ ಆಸ್ತಿಯಾಗಿದ್ದು, ಅದನ್ನು ಅವರು ಮಗಳಿಗೆ ದಾನ ಪತ್ರದ ಮೂಲಕ ನೀಡಿರುವುದು ಊರ್ಜಿತ ಎಂದು ಆದೇಶ ಆಗಿರುತ್ತದೆ ಎಂದರೆ ಸರಿಯಲ್ಲ.

6. ಆರ್ ಎ ನಂಃ11/2018 ರಲ್ಲೂ ಸಹ ಈ ನ್ಯಾಯಾಲಯದ ಆದೇಶವನ್ನು ಎತ್ತಿಹಿಡಿಯಲಾಗಿತ್ತು ಎಂದರೆ ಸಾಕ್ಷಿ ಅದು ತಪ್ಪು ಆಗಿದೆ ಎಂದು ನುಡಿಯುತ್ತಾರೆ. ಆರ್ ಎ ನಂಃ11/2018 ನ್ನು ನಾನು ಸಲ್ಲಿಸಿದ್ದೆ. ನಾನು ದಾಖಲಿಸಿದ ಮೇಲ್ಮನವಿ ವಜಾ ಆಯಿತು ಎಂದರೆ ಸರಿ. ಸದರಿ ಆದೇಶವನ್ನು ನಾನು ಪ್ರಶ್ನಿಸಿ ನಾನು ಗೌರವಾನ್ವಿತ ಉಚ್ಚ ನ್ಯಾಯಾಲಯಕ್ಕೆ 2 ನೇ ಮೇಲ್ಮನವಿಯನ್ನು ಆರ್ ಎಸ್ ಎ ನಂಃ100526/2019 ರಂತೆ ಸಲ್ಲಿಸಿದ್ದೆ ಎಂದರೆ ಸರಿ. ಸದರಿ ಮೇಲ್ಮನವಿ ವಜಾ ಆಗಿದಿಯಾ ಎಂದರೆ ಸಾಕ್ಷಿ ಅದು ಮುಕ್ತಾಯ ಆಗಿದೆ, ಆದರೆ ಹಿಸ್ಸಾ ಆಗಿಲ್ಲ ಎಂದು ನುಡಿಯುತ್ತಾರೆ. ಸದರಿ ಆದೇಶವನ್ನು ಪ್ರಶ್ನಿಸಿ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿರುವುದಾಗಿ ಮಾಹಿತಿ ನೀಡಿದ್ದೇವೂ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನಾವು ದಾಖಲಿಸಿದ ಅರ್ಜಿ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದಲ್ಲಿ ಮನ್ನಣೆ ಆಗಿರುವುದಿಲ್ಲ ಎಂದರೆ ಸರಿ.

7. ಎಫ್ ಡಿ ಪಿ ನಂಃ11/2019 ನ್ನು ಓ ಎಸ್ ನಂಃ60/2015 ರಲ್ಲಿ ಆದ ಆದೇಶ ಪ್ರಕಾರ ದಾಖಲಿಸಲಾಗಿತ್ತು ಎಂದರೆ ಸರಿ. ಸದರಿ ಎಫ್ ಡಿ ಪಿಯಲ್ಲಿ ನಾನು 9 ಎಕರೆ ಜಮಿನೀಗೆ ಸಂಬಂದಪಟ್ಟ ಹಾಗೇ ಆದ ಆದೇಶ ತಪ್ಪಾಗಿದೆ ಎಂದು ಹೇಳಿ ಆಕ್ಷೇಪಣೆ ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ಈ ರೀತಿ ತಕರಾರು ಸಲ್ಲಿಸಿದ್ದೆ ಎಂದು ಸುಳ್ಳು ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ಎಫ್ ಡಿ ಪಿ ನಂಃ11/2019 ಇದೇ ನ್ಯಾಯಾಲಯದಲ್ಲಿ 9 ಎಕರೆ ಜಮೀನಿಗೆ ಸಂಬಂದಪಟ್ಟ ಹಾಗೇ ಆದೇಶ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಎಫ್ ಡಿ ಪಿ ನಂಃ11/2019 ರಲ್ಲಿ ನಾನು ಮಾಹಿತಿ ನೀಡಿ ವಕೀಲರನ್ನು ನೇಮಕ ಮಾಡಿದ್ದೆ. ಎಫ್ ಡಿ ಪಿ ನಂಃ11/2019 ರಲ್ಲಿ 9 ಎಕರೆ ಮಾತ್ರ ಪಿತ್ರಾರ್ಜಿತ ಆಸ್ತಿ ಎಂದು ಆದೇಶ ಆಗಿದ್ದು, ಇನ್ನುಳಿದ ಜಮೀನು 1 ನೇ ವಾದಿಯ ಸ್ವಯಾರ್ಜಿತ ಆಸ್ತಿಗಳು ಎಂದು ಆದೇಶವಾಗಿರುತ್ತವೆ ಎಂದರೆ ಸರಿಯಲ್ಲ.

8. ವಾದಿಯರು ಈ ದಾವೆಯಲ್ಲಿ ಹಾಜರುಪಡಿಸಿದ ಎಲ್ಲಾ ದಾಖಲೆಗಳು ಮತ್ತು ನ್ಯಾಯಾಲಯದ ಆದೇಶಗಳನ್ನು ನೋಡಿರುತ್ತೇನೆ, ಆದರೆ ಓದಿಸಿ ತಿಳಿದುಕೊಂಡಿರುವುದಿಲ್ಲ, ಸಾಕ್ಷಿ ಮುಂದುವರೆದು ಅವು ಎಲ್ಲಾ ನನಗೆ ಗೊತ್ತಿಲ್ಲದೆ ಹಾಗೆ ಆಗಿರುತ್ತವೆ ಎಂದು ನುಡಿಯುತ್ತಾರೆ. ನಾನು ಎಲ್ಲಾ ದಾವೆ ಮತ್ತು ಮೇಲ್ಮನವಿಗಳಿಗೆ ವಕೀಲರನ್ನು ನಿಯೋಜಿಸಿಕೊಂಡು ಸಂಬಂದಪಟ್ಟ ಹಾಗೇ ಸಾಕ್ಷಿಯನ್ನು ಸಹ ನುಡಿದಿದ್ದೆ ಎಂದರೆ ಸರಿ.

9. ಸದರಿ 8 ಗುಂಟೆ ಜಮೀನು ಎನ್ ಎ ಆಗಿರುವ ಜಮೀನಿನಲ್ಲಿ 1 ನೇ ವಾದಿ ಒಂದು ಮನೆಯನ್ನು ಕಟ್ಟಿರುತ್ತಾರೆ ಎಂದರೆ ಸರಿ. ಸದರಿ ಮನೆ ಕಟ್ಟುವ ಪೂರ್ವದಲ್ಲಿ ದಾನ ಪತ್ರ ಆಗಿರಲಿಲ್ಲ ಎಂದರೆ ಸರಿ, ಸಾಕ್ಷಿ ಮುಂದುವರೆದು ಆಗ ನಾವು ಎಲ್ಲರೂ ಕೂಡಿ ಒಟ್ಟು ಕುಟುಂಬದಲ್ಲಿ ಇದ್ದೇವು ಎಂದು ನುಡಿಯುತ್ತಾರೆ. ನನ್ನ ತಂದೆಗೆ ನಾನು ತಲೆಗೆ ಹೊಡೆದಿದ್ದರಿಂದ ನನ್ನ ತಂದೆ ಮತ್ತು ತಾಯಿ ನನ್ನ ವಿರುದ್ಧ ಪೊಲೀಸ ದೂರು ದಾಖಲಿಸಿದ್ದರು ಆ ಬಗ್ಗೆ ಪ್ರಕರಣ ಇದೇ ನ್ಯಾಯಾಲಯದಲ್ಲಿ ವಿಚಾರಣೆಯಾಗಿರುತ್ತದೆ ಎಂದರೆ ಸಾಕ್ಷಿ ದೂರು ದಾಖಲಿಸಿದ್ದರು, ಸದರಿ ಪ್ರಕರಣ ಮಾನ್ಯ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಇನ್ನು ಚಾಲ್ತಿಯಲ್ಲಿ ಇದೆ. ಸಾಕ್ಷಿ ಮುಂದುವರೆದು ನಾನು ಅವರಿಗೆ ಹೊಡೆದಿರಲಿಲ್ಲ ಎಂದು ನುಡಿಯುತ್ತಾರೆ. ಸದರಿ ಕಂಪ್ಲೆಂಟ್ 1 ನೇ ವಾದಿ 2 ನೇ ವಾದಿಗೆ ದಾನ ಪತ್ರ ಮಾಡಿರುವ ವಿಚಾರವಾಗಿ ಹೊಡೆದಾಟ ಆಗಿತ್ತು ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಅವರೆ ನನ್ನನ್ನು ಮತ್ತು ನನ್ನ ಹೆಂಡತಿಯನ್ನು ಹೊರಹಾಕಿದ್ದರು ಎಂದು ನುಡಿಯುತ್ತಾರೆ. ನನ್ನ ತಂದೆ ತಾಯಿ

ನನಗೆ ಮನೆಯಿಂದ ಹೊರಗೆ ಹಾಕಿದ ನಂತರ ದನದ ಕೊಠಡಿಯಲ್ಲಿ ವಾಸ ಮಾಡಲು ಅನುಮತಿ ನೀಡಿದ್ದರು ಎಂದರೆ ಸಾಕ್ಷಿ ಅದು ಹಿರಿಯರು ಮನೆಯಲ್ಲೆ ಇರಲು ಮಾಡಿದ್ದರು ಎಂದು ನುಡಿಯುತ್ತಾರೆ.

10. ನನ್ನ ತಂದೆ ತಾಯಿ ಮತ್ತು ನಮ್ಮ ನಡುವೆ ಆವಾಗಿನಿಂದ ಮನಸ್ಸಾ ಮನಸ್ಸಾ ಸರಿ ಇರದ ಕಾರಣ ನಾವು ಬೇರೆ ಬೇರೆ ಅಡುಗೆ ಮಾಡುತ್ತೇವೆ ಎಂದರೆ ಸಾಕ್ಷಿ ಕೂಡೆ ಮಾಡುತ್ತೇವೆ ಎಂದು ನುಡಿಯುತ್ತಾರೆ. ಈ ರೀತಿ ಕೂಡೆ ಮಾಡುತ್ತಿದ್ದೇವೆ ಅಂತ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಓ ಎಸ್ ನಂಃ60/2015 ದಾಖಲು ಆದಾಗಿನಿಂದ ಹಾಗೂ ಅದಕ್ಕಿಂತ ಪೂರ್ವದಿಂದ ದಾನ ಪತ್ರದ ವಿಚಾರವಾಗಿ ನನ್ನ ಮತ್ತು ತಂದೆ ತಾಯಿಯೊಂದಿಗೆ ಮನಸ್ಸಾ ಮನಸ್ಸಾ ಸರಿ ಇರುವುದಿಲ್ಲ ಎಂದರೆ ಸರಿಯಲ್ಲ. ಈ ರೀತಿ ಮನಸ್ಸಾ ಮನಸ್ಸಾ ನಾವು ಸರಿ ಇದ್ದೇವೆ ಅಂತ ಸುಳ್ಳು ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ಇಂದಿನವರೆಗೂ ನಮಗೂ ಮತ್ತು ನನ್ನ ತಾಯಿ ತಂದೆ ನಡುವೆ ಮಾತು ಇರುವುದಿಲ್ಲ ಎಂದರೆ ಸರಿಯಲ್ಲ.

11. ಈ ದಾವಾದ 8 ಗುಂಟೆ ಜಮೀನಿಗೆ ಸಂಬಂದಪಟ್ಟ ಹಾಗೆ ನನಗೆ ಯಾವುದೇ ಮಾಲೀಕತ್ವದ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದ ಆದೇಶಗಳ ಪ್ರಕಾರ ನನಗೆ ಸದರಿ ಆಸ್ತಿಯಲ್ಲಿ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ನಿಪಿಃ8 ಮತ್ತು 9 ರಲ್ಲಿ ಕಾಣುವ ಶೆಡ್ಡನ್ನು ನೀವು ಕಟ್ಟುತಿದ್ದೀರಾ ಎಂದರೆ ಸಾಕ್ಷಿ ಎಲ್ಲರೂ ಕೂಡಿ ಕಟ್ಟುತಿದ್ದವು ಎಂದು ನುಡಿದಿದ್ದು, ಮುಂದಿನ ಪಾಟೀ ಸವಾಲಿಗೆ ಸಹಕರಿಸಿದ ಕಾರಣ ಮುಂದಿನ ಪಾಟೀ ಸವಾಲು ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

**ಸಹಿ ಆಗಿದೆ.**

**ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂ.ಗಳು**

**ಕುಂದಗೋಳ.**